ಇದರ ಯೂನಿಯನ್ ಅವರು ಮತ್ತು ಸರ್ಕಾರದವರು ಅಪೀಲ್ ಮಾಡಿದ್ದಾರೆ. ಇದು ಇನ್ನೂ ಪೆಂಡಿಂಗ್‌ನಲ್ಲಿದೆ. ಇದರ ಬಗ್ಗೆ ನಾನು ಈ ಮೊದಲೂ ಸಹ ಸಾಕಷ್ಟು ವಿವರವಾಗಿ ಹೇಳಿದ್ದೇನೆ.

ಶ್ರೀ ಬಿ. ವಿ. ಕಕ್ಕಿಲಾಯ.— ಕೈಗಾರಿಕೆಗಳಲ್ಲಿ ಒಂದು ಶಾಂತ ವಾತಾವರಣವನ್ನು ನಿರ್ಮಿಸಲು ಅಲ್ಲಿ ಏನಾದರೂ ಮುಷ್ಕರಗಳಾದರೆ ಮತ್ತು ಬೀಗಮುದ್ರೆ ಹಾಕಿದರೆ ತಾವು ಕೂಡಲೇ ಮಧ್ಯಪ್ರವೇಶ ಮಾಡಿ ಜಾಗ್ರತೆ ಇತ್ಯರ್ಥ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಬಿ. ಜಕನೂರ್.— ಸಾಧ್ಯವಾದಷ್ಟೂ ಬೇಗ ಪ್ರಯತ್ನ ಮಾಡುತ್ತೇವೆ. ನಾವು ಯಾರಿಗೂ ತಾರತಮ್ಯ ಮಾಡುವುದಿಲ್ಲ ಮತ್ತು ಹೈಕೋರ್ಟಿನ ಆದೇಶದಂತೆ ನಾವು ನಡೆದುಕೊಳ್ಳುತ್ತೇವೆ.

Agencies for Supply of Cement to Upper Krishna Project from 1-3-1979 to 31-12-1980.

1006 SRI PRABHAKAR R. TELKAR (Chittapur).—Will the Minister of State for Major and Medium Irrigation be pleased to state.—

(a) the names of transport agencies which transported cement to U.K.P. during he period from 1-3-1979 to 31-12-1980; (Particulars of each agency may be furnished).

(b) the quotation given by the said transport agencies with reference to D. S. R. rates (Detail information may please be furnished);

(c) the quantity of cement and iron transported to U K. P. by the aforesaid agencies during the period 1-3-1979 to 31-12-1980,

(d) whether they are aware that some portion of the materials (Cement and Iron) have not reached to the U.K.P. Godowns;

(e) if so, the quantity of cement and iron missing from the godowns;

(f) steps taken by them in this regard ?

SRI B.B. CHIMMANAKATTI(Minister of State for Major and Medium Irrigation).—

(a) The names of Transport agencies are laid on the Table of the house.

* (b) Details furnished in the statement is laid on the table.

* (c) Details furnished in the statement is laid on the table.

(d) Some portion of cement has not reached the U.K.P. Godowns from the factories.

(e) No quantity of cement is missing from the Godowns.

(f) Detailed investigation is taken up by C.O.D.

---

* Lib No. 55, dated 24-7-82.

ಶ್ರೀ ಪ್ರಭಾಕರ್ ತೇಲ್ಕರ್.—ಇಲ್ಲಿ ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಉಗ್ರಾಣದಿಂದ ಯಾವುದೇ ಪ್ರಮಾಣದಲ್ಲಿ ಸಿಮೆಂಟ್ ಕಾಣೆಯಾಗಿಲ್ಲ ಎಂದು ಹೇಳಿದ್ದೀರಿ. ಆದರೆ ನನಗೆ ಕೊಟ್ಟಿರುವ ಸ್ಟೇಟ್‌ಮೆಂಟ್‌ನಲ್ಲಿ ಸಾಕಷ್ಟು ಸಿಮೆಂಟ್ ಉಗ್ರಾಣವನ್ನು ಮುಟ್ಟಲಿಲ್ಲವೆಂದು ಹೇಳಿದ್ದೀರಿ. ಅಂದರೆ ಇದರ ಪ್ರಮಾಣ ಎಷ್ಟು ಎಂಬುದನ್ನು ಹೇಳುತ್ತೀರಾ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಸಿಮೆಂಟ್ ಉಗ್ರಾಣದಿಂದ ಮಿಸ್ ಆಗಿಲ್ಲ ಕಂಟ್ರಾಕ್ಟರ್ಸ್ ಫ್ಯಾಕ್ಟರಿಯಿಂದ ಉಗ್ರಾಣಕ್ಕೆ ತರಬೇಕಾದರೆ ಮಾರ್ಗ ಮಧ್ಯದಲ್ಲಿ ಇದು ಮಿಸ್ ಆಗಿರುವುದು. ಪ್ರೀಮಿಕ್ಸ್ ಟೆಂಟ್ರಿಕ್ ಟನ್ ಸಿಮೆಂಟ್ ಮಿಸ್ ಆಗಿದೆ.

SRI PRABHAKAR TELKAR.—You have given the names of the Contractors, as M/s Pannalal Brothers, Transport Contractor, Raichur and Sri Dharam Singh Transport Contractor, Gulbarga District. ತಾವು ಬೇಕಾದ ಪ್ರಕಾರ ಈ ಇಬ್ಬರು ಕಂಟ್ರಾಕ್ಟರುಗಳು ಸುಮಾರು ೨ ಸಾವಿರಕ್ಕಿಂತ ಹೆಚ್ಚಿಗೆ ಮೆಟ್ರಿಕ್ ಟನ್ ಸಿಮೆಂಟನ್ನು ಅವರು ತರಲಿಲ್ಲ. ಯಾವ ರೇಟ್ ಪ್ರಕಾರ ಅವರಿಗೆ ನೀವು ಈ ಸಿಮೆಂಟ್ ಕೊಟ್ಟಿದ್ದೀರಿ? ಇದರಲ್ಲಿ ಕಂಡಿಷನ್ಸ್ ಏನೇನು ಇಟ್ಟಿದ್ದೀರಿ? ಏಕೆಂದರೆ ಫ್ಯಾಕ್ಟರಿಯಿಂದ ಈ ಸಿಮೆಂಟ್ ನಿಮ್ಮ ಸೆಕ್ಟೋರ್ಸ್‌ಗೆ-ಯು.ಕೆ.ಪಿ ಗೋಡನ್‌ಗೆ ಬಂದೇಕು, ಕಥವಾ ಬೇರೆ ಬೇರೆ ಡಿವಿಷನ್‌ಗೆ ಬರಬೇಕು. ಆ ಸಿಮೆಂಟ್ ಬಂದಿಲ್ಲ ಎಂದಾಗ, ನೀವು ಅವರಿಗೆ ಏನೇನು ಕಂಡಿಷನ್ಸ್ ಹಾಕಿದ್ದೀರಿ? ಅದರ ರೇಟ್ ಏನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್‌ನಲ್ಲಿ ಈ ಬಗ್ಗೆ ಪೂರ್ತಿ ವಿವರಗಳನ್ನು ಕೊಟ್ಟಿದ್ದೇನೆ ಯಾವ ಕ್ವಾರ್ಟರ್‌ನಲ್ಲಿ ಅವರು ಮಿಸ್ ಮಾಡಿದ್ದಾರೆ ಮತ್ತು ಈ ಡಿ ಎಸ್.ಆರ್ ರೂಲ್ಸ್ ಪ್ರಕಾರ ಯಾವಾವ ರೇಟ್ ಮೇಲೆ ಕೊಡಬೇಕು ಎಂಬುದನ್ನೂ ಕೂಡ ನಾನು ನನ್ನ ಸ್ಟೇಟ್‌ಮೆಂಟ್‌ನಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ಎಷ್ಟು ಮೆಟ್ರಿಕ್‌ಟನ್ ಸಿಮೆಂಟ್ ಮಿಸ್ ಆಗಿದೆ ಎಂಬುದರ ಬಗ್ಗೆ ಕೂಡ ಅದರಲ್ಲಿ ವಿವರಗಳನ್ನು ಕೊಟ್ಟಿದ್ದೇನೆ. ನಾವು ೩ ಕಂಟ್ರಾಕ್ಟರ್ಸ್‌ಗೆ ಕೊಡಬೇಕಾದರೂ ಕೂಡ ಹಣವನ್ನು ಡಿಪಾಸಿಟ್ ಇಟ್ಟುಕೊಂಡಿರುತ್ತೇವೆ ಸುಮಾರು ಒಂದು ಬ್ಯಾಗಿಗೆ ಒಂದು ರೂಪಾಯಿಯನ್ನು ನಾವು ಅವರಿಗೆ ಕೊಡುವುದು ಇತ್ತು ಎಂದರೆ ಆ ಡಿಪಾಸಿಟ್‌ನಲ್ಲಿ ಅವರು ಮಿಸ್ ಮಾಡಿರತಕ್ಕಂಥಾದ್ದನ್ನು ರಿಕವರಿ ಮಾಡಿಕೊಳ್ಳುವಾಗ ೨ ರೂಪಾಯಿಗಳನ್ನು ರಿಕವರಿ ಮಾಡಿಕೊಳ್ಳುತ್ತೇವೆ. ಈ ರೀತಿ ನಾವು ಡಬಲ್ ದಿ ರೇಟ್‌ನಲ್ಲಿ ರಿಕವರಿ ಮಾಡಿಕೊಳ್ಳಕ್ಕಂಥ ಸಂದರ್ಭದಲ್ಲಿ ಸಹ ಅವರ ಬಿಲ್ಲನ್ನು ಕೂಡ ಪೂರ್ತಿಯಾಗಿ ಪೆಂಡಿಂಗ್ ಇಟ್ಟುಕೊಂಡಿದ್ದೇವೆ, ಅದನ್ನು ಪೇಮೆಂಟ್ ಮಾಡಿಲ್ಲ. ಈ ಕಂಟ್ರಾಕ್ಟರ್ಸ್ ಪ್ರಾಪರ್ಟಿ ಬಗ್ಗೆ ನಾವು ಸಬ್‌ರಿಜಿಸ್ಟ್ರಾರ್‌ರಿಗೆ ತಿಳಿಸಿದ್ದೇವೆ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಿಗೂ ತಿಳಿಸಿದ್ದೇವೆ. ಬೇರೆಯವರ ಜೊತೆಯಲ್ಲಿ ಅವರು ವ್ಯವಹಾರ ಮಾಡಬಾರದೆಂದು ಕೂಡ ಹೇಳಿದ್ದೇವೆ.

ಶ್ರೀ ಪ್ರಭಾಕರ ತೇಲ್ಕರ್.—ನೀವು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್‌ನಲ್ಲಿ ರೇಟ್ ಬಗ್ಗೆ ಏನೂ ಹೇಳಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಆ ಪ್ರದೇಶದ ಚೀಫ್ ಇಂಜಿನಿಯರ್ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಮುಂದೆ ಸಾಕ್ಷ್ಯ ಕೊಡತಕ್ಕಂಥ ಸಂದರ್ಭದಲ್ಲಿ ಈ ರೀತಿ ಸಿಮೆಂಟನ್ನು ಗೋದಾಮಿನಿಂದ ತೆಗೆದು ಕೊಂಡಿರುವುದರಿಂದ ಅವನ್ನು ಅಕೌಂಟ್ಸ್‌ಗೆ ಕೊಟ್ಟಿಲ್ಲ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತು ಮಾನ್ಯ ಮಂತ್ರಿಯವರೂ ಕೂಡ ಅದೇ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಈಗಾಗಲೇ ಇನ್‌ಕ್ವೈರಿ ತಡವಾಗಿದೆ. ಇನ್ನೂ ತಡಮಾಡುವುದಾದರೆ ಅವರು ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶವಿದೆ. ಅವರ ಪ್ರಾಪರ್ಟಿ ಎಷ್ಟಿದೆ ಮಾರಾಟ ಬಗ್ಗೆ ನಿಮ್ಮ ಹತ್ತಿರ ಏನಾದರೂ ಲಿಸ್ಟ್ ಇದೆಯೇ. ಆ ಲಿಸ್ಟ್ ಇದ್ದರೆ ಅದರ ವ್ಯಾಲ್ಯೂ ಏನು. ಎಷ್ಟರವರೆಗೆ ನೀವು ಅವರಿಂದ ಇ.ಎಂ.ಡಿ. ತೆಗೆದುಕೊಂಡಿದ್ದೀರಿ. ಈ ಇ.ಎಂ.ಡಿ ತೆಗೆದುಕೊಂಡಿರತಕ್ಕಂಥ ಹಣದ ಮೊತ್ತ ಏನು. ಅವರು ಮಿಸ್‌ಅಪ್ರೋಪ್ರಿಯೇಷನ್ ಮಾಡಿರತಕ್ಕಂಥ ಸಿಮೆಂಟ್ ಕ್ವಾಂಟಿಟಿಯ ಬೆಲೆ ಏನು. ಈ ವಿವರಗಳನ್ನು ತಿಳಿಸುವುದಕ್ಕಾಗುತ್ತದೆಯೇ. ನಾನು ಈ ಪ್ರಶ್ನೆಯನ್ನು ಏಕೆಕ್ಕೆ ಕೇಳುತ್ತಿದ್ದೇನೆ ಎಂದರೆ ಇದು ಸಣ್ಣಪುಟ್ಟ ಅಮೌಂಟ್ ಏನೂ ಅಲ್ಲ. ಅವರು ಸಿಮೆಂಟನ್ನು ಮಾರಿಕೊಂಡ

ದ್ದಾಯಿತು, ಅವರನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಅವರಲ್ಲೂ ನಿಧಾನವಾಗಿದೆ. ನೀವು ಪೋಲೀಸ್ ಕಂಪ್ಲೈಂಟ್ ಕೊಟ್ಟಿದ್ದರೆ ಸಾಕಾಗಿತ್ತು, ಅವರನ್ನು ಪ್ರಾಸಿಕ್ಯೂಟ್ ಮಾಡಿ ಅರೆಸ್ಟ್ ಮಾಡಬಹುದಾಗಿತ್ತು. ಈ ಬಗ್ಗೆ ಸಿ.ಓ.ಡಿ ರಿಪೋರ್ಟನ್ನು ಒಂದು ವಾರದಲ್ಲಿ ಕೊಡುತ್ತೇನೆ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ೧೦ ದಿವಸಗಳ ಹಿಂದೆ ಹೇಳಿದರು. ಆಗಲೇ ೧೦ ದಿವಸಗಳು ಆಗಿ ಹೋದವು. ಇನ್ನೂ ಕೊಡಲಿಲ್ಲ. ಆ ಸಿ.ಓ.ಡಿ ರಿಪೋರ್ಟ್ ಏನಾಯಿತು. ಇದನ್ನು ವಿಜಿಲೆನ್ಸ್ ಕಮಿಷನ್ ಗೆ ಒಪ್ಪಿಸಿದ್ದೇವೆ ಎಂದು ನೀವು ಹೇಳಿದ್ದೀರಿ. ಅದು ಏನಾಯಿತು.

ಶ್ರೀ ಬಿ ಬಿ ಚಿಮ್ಮನಕಟ್ಟಿ —ಮಾನ್ಯ ಅಧ್ಯಕ್ಷರೇ, ಇದನ್ನು ನಾವು ಸಿ.ಒ ಡಿ ಗೆ ರೆಫರ್ ಮಾಡಿದ ಮೇಲೆ ಅವರು ಈ ಬಗ್ಗೆ ಒಂದು ರಿಪೋರ್ಟನ್ನು ಸರ್ಕಾರಕ್ಕೆ ಸಬ್ಮಿಟ್ ಮಾಡಿದ್ದಾರೆ. ಅವರು ಅದರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಯಾವ್ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೋ ಅದೇ ರೀತಿಯಲ್ಲಿ ನಾವು ಕ್ರಮವನ್ನು ಈಗಾಗಲೇ ತಗೆದುಕೊಂಡಿದ್ದೇವೆ. ಈ ಬಗ್ಗೆ ನಾವು ಈಗಾಗಲೇ ೧೦ ಜನರನ್ನು ಸಸ್ಪೆಂಡ್ ಮಾಡಿದ್ದೇವೆ. ಆದರಲ್ಲಿ ೩ ಜನರಿಗೆ ಈಗಾಗಲೇ ಕೋರ್ಟಿನಲ್ಲಿ ಚಾರ್ಜ್‌ಷೀಟ್ ಫೈಲ್ ಮಾಡಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ಹೆಸರು ಏನು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಅವರ ಹೆಸರುಗಳು ಏನಿದೆ ಎಂದರೆ, ಶ್ರೀ ಕೃಷ್ಣಾಚಾರ್ ಎಸ್.ಸಿ. ಶ್ರೀ ತಿಮ್ಮಪ್ಪ ಮಾರ್ಚಲ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಶ್ರೀ ನರಸಿಂಗರಾವ್, ಸೂಪರಿಂಟೆಂಡೆಂಟ್ ಆಫ್ ಪೋಲೀಸ್— ಈ ಮೂರು ಜನರ ಮೇಲೆ ಚಾರ್ಜ್‌ಷೀಟ್ ಫೈಲ್ ಮಾಡಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್ —ಸಸ್ಪೆನ್ಷನ್‌ನಲ್ಲಿ ಇಟ್ಟಿರುವವರ ಹೆಸರು ಹೇಳಿ.

ಶ್ರೀ ಬಿ ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಈ ಬಗ್ಗೆ ಇಲ್ಲಿ ೩ನೇ ಸಾರಿ ಉತ್ತರ ಏನ್ನು ಕೊಡುತ್ತಿದ್ದೇನೆ ಸುಮಾರು ೧೦ ಜನರ ಮೇಲೆ ನಾವು ಸಸ್ಪೆನ್ಷನ್ ಆರ್ಡರನ್ನು ಹೊರಡಿಸಿದ್ದೇವೆ. ಈ ಮನೆಯಲ್ಲಿ ಮೊನ್ನೆಯ ದಿವಸ ನಾನು ಉತ್ತರ ಕೊಡುವಾಗ ಕೂಡ ಲಿಸ್ಟ್ ಬಗ್ಗೆ ಹೇಳಿದ್ದೇನೆ. ಮತ್ತೆ ಹೇಳಬೇಕು ಎಂದರೆ ಅದನ್ನು ಬೇಕಾದರೆ ನಾನು ಹೇಳುತ್ತೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ಅವರಿಗೆ ಇರತಕ್ಕಂಥ ಪ್ರೈವೇಟ್ ಪ್ರಾಪರ್ಟಿಯನ್ನು ನೀವು ಏನಾದರೂ ಮಾಡಿ ರಿಕವರಿ ಮಾಡಬೇಕು. ಇಲ್ಲದೇ ಹೋದರೆ ಬಹುಶಃ ಗೌರ್ನಮೆಂಟ್‌ಗೆ ಬರಬೇಕಾಗಿರತಕ್ಕಂಥ ಹಣ ಬರುವುದಿಲ್ಲ ಎಂದು ಹೇಳಿದ್ದಾರೆ. ಆ ಬಗ್ಗೆ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಅವರು ಕೇಳಿದ್ದು ಏನೆಂದರೆ, ಅವರು ಅರ್ನೆಸ್ಟ್ ಮನಿ ಡಿಪಾಸಿಟ್ ಮಾಡಿರುವುದು ಎಷ್ಟು, ಮತ್ತು ಅವರ ಪ್ರಾಪರ್ಟಿ ವ್ಯಾಲ್ಯು ಎಷ್ಟು ಎಂದು ಕೇಳಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸ್ವಾಮಿ, ಸಿ ಒ.ಡಿ.ಗೆ ನಾವು ಇದನ್ನು ರೆಫರ್ ಮಾಡಿದ ಮೇಲೆ ಅವರು ಒಂದು ರಿಪೋರ್ಟನ್ನು ಸರ್ಕಾರಕ್ಕೆ ಸಬ್ಮಿಟ್ ಮಾಡಿದ್ದಾರೆ. ಇ.ಎಂ.ಡಿ. ಎಷ್ಟು ಎಂಬ ಬಗ್ಗೆ ನಾನು ವಿವರಗಳನ್ನು ಒದಗಿಸುತ್ತೇನೆ.

SRI PRABHAKAR R. TELKAR.— Sir, 2200 and odd metric tonnes of Cement have already been misused and its value is in lakhs of rupees I would like to know what the Government has been doing? The Hon'ble Minister has stated that they are taking double the rate. Will it suffice? One bag of Cement in 1980 was Rs. 30-32 but what was the rate at that time at Maharashtra. It was Rs. 120-150. You are allowing these Contractors just to sell the Cement at double or four times the price. Still, you are keeping quiet. The Hon'ble Minister was telling that the COD nquiry is over and all that. What is the use? They are still transporting Cement and Iron. Why the Government is allowing these people? I would therefore like to know the steps taken by the Government in this regard.

ಶ್ರೀ ಪಿ. ರಾಮದೇವ್.— ಸ್ವಾಮಿ, ಈ ವಿಚಾರ ಪತ್ರಿಕೆಯಲ್ಲಿ ಬಂದಿದೆ, ಈ ಬಗ್ಗೆ ಕೋರ್ಟಿನಲ್ಲಿ ಮೊಕದ್ದಮೆಗಳು ಆಗಿವೆ. ಇದನ್ನು ಚರ್ಚೆ ಮಾಡುವುದರಿಂದ ಸಬ್ಜುಡಿಸ್ ಆಗುವುದಿಲ್ಲವೆ ? The matter is before the Court. It is sub-judice and we cannot discuss it because the issue is before the Court.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಸ್ವಾಮಿ, ನಾವು ಈಗಾಗಲೇ ಅವರ ಮೇಲೆ ಚಾರ್ಜ್‌ಷೀಟ್ ಹಾಕಿದ್ದೇವೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಈಗಾಗಲೇ ಆ ಹಣವನ್ನು ಡಬಲ್ ರೇಟ್‌ನಲ್ಲಿ ವಸೂಲು ಮಾಡಿದರೆ ಅಷ್ಟೇ ಸಾಲದು, ಅವರ ಮೇಲೆ ಪೀರಿಯಸ್ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಈಗಾಗಲೇ ಪಿ.ಓ.ಡಿ ರಿಪೋರ್ಟ್ ಸರ್ಕಾರಕ್ಕೆ ಬಂದಿದೆ. ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.— ಅವರ ಪ್ರಶ್ನೆ ಅದಲ್ಲ. ಅವರು ೨ ಸಾವಿರ ಚಿಲ್ಲರೆ ಮೆಟ್ರಿಕ್‌ಟನ್ ಸಿಮೆಂಟ್ ಸಾಗಿಸಿ ವ್ಯಾಪಾರಿ. ಆಪತ್ತಿನ ಬೆಲೆ ೩೦ ರೂಪಾಯಿ. ಈಗ ಮಹಾರಾಷ್ಟ್ರದಲ್ಲಿ ೧೫೦ ರೂಪಾಯಿ ಇತ್ತು. ಈಗ ಜಾಸ್ತಿಯಾಗಿದೆ. ಆ ಹಣ ನಷ್ಟವಾಯಿತಲ್ಲ, ಅದಕ್ಕೆ ಏನು ಮಾಡುತ್ತೀರಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಆ ಬಗ್ಗೆ ಸರ್ಕಾರಕ್ಕೆ ಯಾವುದೇ ಹಾನಿ ಆಗದ ರೀತಿಯಲ್ಲಿ ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ, ಅದರಲ್ಲಿ ನಾವು ಹಿಂದೇಟು ಹಾಕುವುದಿಲ್ಲ.

SRI PRABHAKAR R. TELKAR.— Still they are Contractors. You are still giving transport charges. You are still allowing these contractors to make business at the cost of our public money and the irrigation project work is being stopped on account of this. Why the Government is allowing these people to continue their business ? Will the Government take stern action against those concerned and see that this is stopped ?

ಶ್ರೀ ಬಿ. ಬಿ ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಇವೆಲ್ಲಾ ಕೇಸುಗಳು ಆದನಂತರ ನಾವು ಬಹಳ ಪ್ರೀ ಕಾಷನ್ಸ್ ತೆಗೆದುಕೊಂಡು ಇನ್ನು ಮುಂದೆ ಆವ್ಯವಹಾರ ನಡೆಯದ ರೀತಿಯಲ್ಲಿ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಈಗ ರಿಸೆಂಟ್ ಆಗಿ ಅವ್ಯವಹಾರ ಮತ್ತು ಮಿಸ್ಸಿಂಗ್ ಆಗತಕ್ಕಂಥ ಕೇಸ್‌ಗಳ ಬಗ್ಗೆ ಸರ್ಕಾರಕ್ಕೆ ಕಂಡುಬಂದಿಲ್ಲ. ಆ ರೀತಿ ಕಂಡುಬಂದಿಲ್ಲ. ಆ ರೀತಿ ಕಂಡುಬಂದರೆ ಆ ಬಗ್ಗೆ ಹೆಚ್ಚಿನ ಕ್ರಮ ಕೈಕೊಳ್ಳುವುದಕ್ಕೆ ನಾವು ಹಿಂದೇಟು ಹಾಕುವುದಿಲ್ಲ.

ಶ್ರೀ ಎಸ್. ಎಸ್. ಆರಕೇರಿ.— ಸ್ವಾಮಿ, ಈ ಕಂಟ್ರಾಕ್ಟರ್ಸ್‌ಗಳ ಮೇಲೆ ಕೇವಲ ಚಾರ್ಜ್‌ಷೀಟ್ ಹಾಕುವುದರಿಂದ ಮತ್ತು ಈ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿಸಿ ಪಿ.ಓ.ಡಿ. ರಿಪೋರ್ಟನ್ನು ಸರ್ಕಾರಕ್ಕೆ ತರಿಸಿಕೊಂಡರೆ ಸಾಲದು. ಈ ಕಂಟ್ರಾಕ್ಟರ್ಸನ್ನು ಬ್ಲಾಕ್ ಲಿಸ್ಟ್‌ನಲ್ಲಿಟ್ಟು ಅವರ ಮೇಲೆ ಸರಿಯಾದ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡಿದರೆ ಒಳ್ಳೆಯದಲ್ಲವೇ ? ಈ ಒಂದು ವ್ಯವಹಾರದಲ್ಲಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಲಾಸ್ ಆಗುತ್ತಿದೆ ಆದ್ದರಿಂದ ದಯವಿಟ್ಟು ಆ ಕಂಟ್ರಾಕ್ಟರ್ಸನ್ನು ಇಮ್ಮೆಡಿಯಟ್ ಆಗಿ ಅರೆಸ್ಟ್ ಮಾಡಿಸಿ ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಡಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಈಗಾಗಲೇ ಕೆಲವುಜನ ಕಂಟ್ರಾಕ್ಟರ್ಸನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಟ್ಟಿದ್ದೇವೆ. ಅವರ ಕಂಟ್ರಾಕ್ಟ್ ಲೈಸೆನ್ಸನ್ನೂ ಕೂಡ ಕ್ಯಾನ್ಸಲ್ ಮಾಡಿದ್ದೇವೆ.

SRI PRABHAKAR R. TELKAR.— According to the Statement, there are only two Contractors—Punnalal of Raichur and Dharamsingh of Gulbarga, but, Sir, there are other Contractors also who are doing these things. What action the Government has taken against those Contractors

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಶ್ರೀ ಧರ್ಮಸಿಂಗ್ ಮತ್ತು ಶ್ರೀ ಪನ್ನಾಲಾಲ್ ಅಷ್ಟೇ ಅಲ್ಲ. ಇನ್ನುಳಿದ ಕಂಟ್ರಾಕ್ಟರುಗಳ ಹೆಸರುಗಳನ್ನು ನಾನು ಕೊಟ್ಟಿದ್ದೇನೆ. ಅದೆಲ್ಲಾ ಲಿಸ್ಟ್‌ನಲ್ಲಿ ಇವೆ. ಮಾನ್ಯ ಸದಸ್ಯರು ಅದನ್ನು ನೋಡಬೇಕು, ಶ್ರೀ ನಾಗಪ್ಪ ಮಂತ್ರಿತರರು ಇದ್ದಾರೆ. ಅವರಮೇಲೆ ನಾವು ಈಗಾಗಲೇ ಕ್ರಮ ಕೈಕೊಂಡಿದ್ದೇವೆ.

ಶ್ರೀ ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇಲ್ಲಿ ಕೊಟ್ಟಿರತಕ್ಕಂಥ ಲಿಖಿತ ಉತ್ತರದಲ್ಲಿ ಅಲ್ಪ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳಿಂದ ಕೃಷ್ಣಾ ಮೇಲ್ದಂಡೆ ಯೋಜನೆಯ ಉಗ್ರಾಣಕ್ಕೆ ತಲುಪಿರುವುದಿಲ್ಲ ಎಂದು ಹೇಳಿದ್ದಾರೆ. ಯಾವ್ಯಾವ ಕಾರ್ಖಾನೆಗಳಿಂದ ಎಷ್ಟೆಷ್ಟು ಸಿಮೆಂಟ್ ಉಗ್ರಾಣಕ್ಕೆ ತಲುಪಿರುವುದಿಲ್ಲ ಎನ್ನುವ ಬಗ್ಗೆ ಅವರು ಉತ್ತರವನ್ನು ಕೊಡಬೇಕು ಮತ್ತು ಗುಪ್ತ ದಳದಿಂದ ತನಿಖೆಯನ್ನು ಪ್ರಾರಂಭಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ, ೨ ಸಾವಿರ ಚೀಲ್ಲರೆ ಸಿಮೆಂಟ್ ಮತ್ತು ಕಬ್ಬಿಣ ಕೂಡ ಕೃಷ್ಣ ಮೇಲ್ದಂಡೆ ಯೋಜನೆಗೆ ಬಂದಿಲ್ಲ ಎಂದು ಹೇಳಿದ್ದಾರೆ. ಹಾಗೆ ಬರದಿದ್ದರೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು. ನಾರಾಯಣಪುರ ಡ್ಯಾಮ್ ಪಂಗಿದಿದೆ. ಅದಕ್ಕೆ ಸಿಮೆಂಟ್ ಮತ್ತು ಕಬ್ಬಿಣದ ಸರಬರಾಜು ಕಡಿಮೆಯಾಯಿತು, ಆದರೂ ವರ್ಕ್ ಎಲ್ಲಾ ಆಯಿತು ಎಂದು ಹೇಳಿದರು. ಅದು ಯಾವ ರೀತಿ ಆಯಿತು ಎಂಬುದನ್ನು ಮಾನ್ಯ ಸಚಿವರು ವಿವರವಾಗಿ ಉತ್ತರಿಸಬೇಕು

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬೇರೆ ಪ್ರಶ್ನೆಯನ್ನು ಹಾಕಿದರೆ ನಾನು ವಿವರವಾದ ಉತ್ತರವನ್ನು ಕೊಡುತ್ತೇನೆ.

SRI PRABHAKAR TELKAR.—About 3,000 tonnes of cement has gone outside. So, whether the Government has taken steps to recoup or bring that 3,000 tonnes of cement in order to see that works do not suffer. Whether any alternative arrangement have been made ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಪೂರ್ತಿಯಾಗಿ ಎಲ್ಲಾ ಹೊರಗೆ ಹೋಗುತ್ತಾ ಇಲ್ಲ. ಈಗ ಹಿಡಿದಿರತಕ್ಕಂಥ ಸಿಮೆಂಟ್ ಏನು ಇದೆ ಅದರಲ್ಲಿ ಸ್ವಲ್ಪ ಪೋಲೀಸ್ ಕಸ್ಟಡಿಯಲ್ಲಿದೆ, ಇನ್ನೂ ಕೂಡ ಸೀಜ್ ಮಾಡುತ್ತಾ ಇದ್ದೇವೆ.

ಶ್ರೀ ಪ್ರಭಾಕರ್ ತೇಲ್ಕರ್.— ಈಗ ನಮ್ಮಲ್ಲಿರತಕ್ಕಂಥಾ ಸಿಮೆಂಟನ್ನಾದರೂ ತಕ್ಷಣ ರಿಲೀಸ್ ಮಾಡಿ ಉಪಯೋಗಿಸಿಕೊಳ್ಳಬೇಕು ಇಲ್ಲದೇ ಹೋದರೆ ಅಲ್ಲಿ ವರ್ಕ್ ಸಫರ್ ಆಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ವರ್ಕ್ ಸಫರ್ ಆಗದೇ ಇದ್ದ ಹಾಗೆ ಅದಕ್ಕೆ ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ಸ್ ಮಾಡಿದ್ದೇವೆ.

ಶ್ರೀ ಗಂಗಣ್ಣ.— ಅಲ್ಪ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳಿಂದ ಕೃಷ್ಣಾ ಮೇಲ್ದಂಡೆ ಯೋಜನೆಯ ಉಗ್ರಾಣಕ್ಕೆ ತಲುಪಿರುವುದಿಲ್ಲ ಅಂತ ಹೇಳಿದ್ದೀರಿ. ಹಾಗಾದರೆ ಆ ಅಲ್ಪ ಪ್ರಮಾಣದ ಕಾರ್ಖಾನೆಗಳು ಯಾವ್ಯಾವುವು ಎನ್ನುವುದನ್ನು ತಿಳಿಸುತ್ತೀರಾ .

ಶ್ರೀ ಬಿ. ಬಿ. ಚಿಮ್ಮನಕಟ್ಟಿ— ಮಾನ್ಯ ಸದಸ್ಯರು ಯಾವ್ಯಾವ ಅಲ್ಪ ಪ್ರಮಾಣದ ಸಿಮೆಂಟ್ ಫ್ಯಾಕ್ಟರಿ ಅಂತ ತಿಳಿಸಿದ್ದರೆ ಅದರ ವಿವರ ಕೊಡಬಹುದಾಗಿತ್ತು. ಅವರು ತಿಳಿಸಿಲ್ಲಾ. ಆದುದರಿಂದ ಬೇರೆ ಪ್ರತ್ಯೇಕವಾಗಿ ಪ್ರಶ್ನೆ ಹಾಕಿದರೆ ತಿಳಿಸುತ್ತೇನೆ.

ಪ್ರಶ್ನೆ ೬೫೬ (೧೨೯೧)—ಶ್ರೀ ಹೆಚ್. ಡಿ. ದೇವೇಗೌಡ ಹೆಲ್ಡ್ ಓವರ್

Seniority List of Assistants in Karnataka Government Secretariat.

1326 SRI G.K. SUBBAIAH (Virajpet).—Will the Chief Minister be pleased to state.—

(a) whether it is a fact that the seniority list of Assistants in Karnataka Government Secretariat is being reviewed.